# All India Radio: Bangalore
# National Bulletin In Kannada
# 09.10.2026  19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<>><><*><><<>**

ಮುಖ್ಯಾಂಶಗಳು

**೧. ಯುವಜನತೆ ನಿರಂತರವಾಗಿ ಕೌಶಲ್ಯ ಬೆಳೆಸಿಕೊಳ್ಳಬೇಕು- ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ**

**೨. ಅಮೆರಿಕದ ಪಿಆರ್‌ಎಂ ನೀತಿಗೆ ಭಾರತ ಆಕ್ಷೇಪ: ಪ್ರತಿಭಾನ್ವಿತರ ಸಂಚಾರ ಎರಡೂ ದೇಶಗಳಿಗೆ ಲಾಭದಾಯಕವೆಂದ ಕೇಂದ್ರ ಸರ್ಕಾರ**

**೩. ಜಂತರ್ ಮಂತರ್‌ನಲ್ಲಿ ಸಿಜೆಪಿ ಪ್ರತಿಭಟನೆಗೆ ದೆಹಲಿ ಪೊಲೀಸರಿಂದ ಅನುಮತಿ ನಿರಾಕರಣೆ**

**೪. ಭಾರತ ಯಾವುದೇ ಕ್ಷೇತ್ರದಲ್ಲಿ ಏಕಸ್ವಾಮ್ಯಕ್ಕೆ ಅವಕಾಶ ನೀಡುವುದಿಲ್ಲ -ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟನೆ**

**೫. ಟಿ-೨೦ ಕ್ರಿಕೆಟ್ ಸರಣಿ; ಎರಡನೇ ಪಂದ್ಯದಲ್ಲಿಂದು ಭಾರತದ ವಿರುದ್ಧ ಟಾಸ್ ಗೆದ್ದು ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ**

**<>><><*><><<>**

ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿರುವ ಈ ಯುಗದಲ್ಲಿ ಯುವಜನತೆ ನಿರಂತರವಾಗಿ ತಮ್ಮ ಕೌಶಲ್ಯಗಳನ್ನು ನವೀಕರಿಸಿಕೊಳ್ಳುವುದು ಮತ್ತು ಉದಯೋನ್ಮುಖ ತಂತ್ರಜ್ಞಾನಗಳಿಗೆ ಪೂರಕವಾಗಿ ಸಜ್ಜಾಗುವುದು ಅತ್ಯಗತ್ಯ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಚೀನಾದ ಶಾಂಘೈನಲ್ಲಿ ನಡೆದ ೪೮ನೇ 'ವಿಶ್ವ ಕೌಶಲ್ಯ ಸ್ಪರ್ಧೆ ೨೦೨೪' ರಲ್ಲಿ ಸ್ಪರ್ಧಿಸಿದ್ದ ಭಾರತ ತಂಡದ ಪ್ರತಿನಿಧಿಗಳೊಂದಿಗೆ ನಡೆಸಿದ ಸಂವಾದದಲ್ಲಿ ಮಾತನಾಡಿದ ಅವರು, ಜಾಗತಿಕ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಹಾಗೂ ತಮ್ಮ ಅನುಭವಗಳ ಮೂಲಕ ಭಾರತವನ್ನು ಕೌಶಲ್ಯ ಮಾನವ ಸಂಪನ್ಮೂಲದ ಜಾಗತಿಕ ಕೇಂದ್ರವನ್ನಾಗಿ ಮಾಡಲು ಕೊಡುಗೆ ನೀಡುವಂತೆ ಕರೆ ನೀಡಿದರು. ಶೈಕ್ಷಣಿಕ ಪದವಿಗಳಷ್ಟೇ ಪ್ರಾಯೋಗಿಕ ಕೌಶಲ್ಯಗಳೂ ಪ್ರಮುಖ ಎಂದ ಪ್ರಧಾನಿ, ಐಐಟಿ ಮತ್ತು ಐಐಎಂಗಳಷ್ಟೇ ಕೌಶಲ್ಯ ತರಬೇತಿ ಸಂಸ್ಥೆಗಳೂ ಮಹತ್ವದ್ದಾಗಿವೆ ಎಂದರು. ಶಾಂಘೈನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಭಾರತದ ೬೦ ಸದಸ್ಯರ ತಂಡ, ೬೩ ಕೌಶಲ್ಯ

ವಿಭಾಗಗಳಲ್ಲಿ ಸ್ಪರ್ಧಿಸಿ, ೬ ಬೆಳ್ಳಿ ಪದಕಗಳು ಹಾಗೂ ೨೦ ಶ್ರೇಷ್ಠತಾ ಪದಕಗಳೊಂದಿಗೆ ಜಾಗತಿಕ ಮಟ್ಟದಲ್ಲಿ ೧೧ನೇ ಸ್ಥಾನ ಪಡೆದುಕೊಂಡಿದೆ.

**<><><*><><<>**

ಖಾಯಂ ಕಾರ್ಮಿಕ ಪ್ರಮಾಣೀಕರಣ-ಪಿಇಆರ್‌ಎಂ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಮೆರಿಕ ಪ್ರಕಟಿಸಿರುವ ನೂತನ ಕ್ರಮಗಳು ಉಭಯ ದೇಶಗಳ ಹಂಚಿಕೆಯ ಆಶೋತ್ತರಗಳನ್ನು ಉತ್ತೇಜಿಸುವುದಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ. ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಪ್ರತಿಭಾನ್ವಿತ ವ್ಯಕ್ತಿಗಳ ಸಂಚಾರವು ಭಾರತ ಮತ್ತು ಅಮೆರಿಕ ಎರಡೂ ದೇಶಗಳ ಆರ್ಥಿಕತೆಗೆ ಮೌಲ್ಯವರ್ಧನೆ ತರಲಿದೆ ಎಂದು ಪ್ರತಿಪಾದಿಸಿದರು. ಈ ಸಂಚಾರವು ಭಾರತೀಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ, ಅತ್ಯಾಧುನಿಕ ತಂತ್ರಜ್ಞಾನದ ಪ್ರತಿಭೆ, ಸಂಶೋಧನೆ, ನಾವೀನ್ಯತೆ, ಉತ್ಪಾದಕತೆ ಮತ್ತು ಹೊಸ ಉದ್ಯೋಗ ಸೃಷ್ಟಿಯ ಮೂಲಕ ಅಮೆರಿಕದ ಕಂಪನಿಗಳಿಗೂ ಸಮಾನವಾಗಿ ಅನುಕೂಲ ಮಾಡಿಕೊಡುತ್ತದೆ ಎಂದು ತಿಳಿಸಿದರು.

**<><><*><><<>**

ನವದೆಹಲಿಯ ಜಂತರ್ ಮಂತರ್‌ನಲ್ಲಿ ಸಿಜೆಪಿ ನಾಳೆ ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗೆ ದೆಹಲಿ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ದೆಹಲಿ ಜಂಟಿ ಪೊಲೀಸ್ ಕಮಿಷನರ್ ನೂಪುರ್ ಪ್ರಸಾದ್, ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಅಥವಾ ಇತರ ಕಾರ್ಯಕ್ರಮಗಳನ್ನು ನಡೆಸಲು ಕನಿಷ್ಠ ೧೦ ದಿನ ಮುಂಚಿತವಾಗಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.  ಪ್ರಸ್ತುತ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ, ಸಾರ್ವಜನಿಕ ಸುರಕ್ಷತೆ ಹಾಗೂ ನವದೆಹಲಿ ಭಾಗದ ಸಂಚಾರ ನಿಯಂತ್ರಣವನ್ನು ಗಮನದಲ್ಲಿಟ್ಟುಕೊಂಡು ಈ ಅನುಮತಿಯನ್ನು ನಿರಾಕರಿಸಲಾಗಿದೆ ಎಂದು ಜಂಟಿ ಕಮಿಷನರ್ ಸ್ಪಷ್ಟಪಡಿಸಿದ್ದಾರೆ.

**<><><*><><<>**

ಭಾರತ ಯಾವುದೇ ಕ್ಷೇತ್ರದಲ್ಲಿ ಏಕಸ್ವಾಮ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟಪಡಿಸಿದ್ದಾರೆ. ಉಪಗ್ರಹ ಸಂವಹನ ಸೇವೆ ಒದಗಿಸಲು ಸ್ಟಾರ್ ಲಿಂಕ್ ಸಂಸ್ಥೆಗೆ ಪರವಾನಗಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ನಿಲುವನ್ನು ಸಚಿವರು ಟೀಕಿಸಿದ್ದಾರೆ. ನವದೆಹಲಿಯಲ್ಲಿ ನಡೆಯುತ್ತಿರುವ ಹತ್ತನೇ ಆವೃತ್ತಿಯ ಇಂಡಿಯಾ ಮೊಬೈಲ್ ಕಾಂಗ್ರೆಸ್-೨೦೨೬ ಉದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ

ಉಪಗ್ರಹ ಸಂವಹ ಸೇವೆ ಒದಗಿಸಲು ಸ್ಟಾರ್ ಲಿಂಕ್, ಜಿಯೋ ಸ್ಯಾಟಲೈಟ್ ಕಮ್ಯುನಿಕೇಷನ್ಸ್ ಹಾಗೂ ಯುಟೆಲ್‌ಸ್ಯಾಟ್ ಒನ್‌ವೆಬ್ ಸೇರಿದಂತೆ ಮೂರು ಕಂಪನಿಗಳು ಉಪಗ್ರಹ ಸಂವಹನದ ಪರವಾನಗಿ ಪಡೆದುಕೊಂಡಿದೆ ಎಂದರು. ನಿಗದಿತ ಚೌಕಟ್ಟು ಅಂತಿಮಗೊಂಡ ನಂತರ ಸರ್ಕಾರ ಆದಾಯ ಹಂಚಿಕೆ ಆಧಾರದ ಮೇಲೆ ಈ ಕಂಪನಿಗಳಿಗೆ ಸ್ಪೆಕ್ಟ್ರಮ್ ಹಂಚಿಕೆ ಮಾಡಲಿದೆ. ಪ್ರತಿಯೊಂದು ಕಂಪನಿ ನಿಗದಿತ ಭದ್ರತಾ ಮಾನದಂಡ ಮತ್ತು ಇತರ ನಿಯಂತ್ರಣ ಅಗತ್ಯತೆಗಳನ್ನು ವೈಯಕ್ತಿಕವಾಗಿ ಪೂರೈಸಿದ ನಂತರವೇ ಸೇವೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಮುಕ್ತ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ವಿವಿಧ ಆಯ್ಕೆಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ ಎಂದರು. ಈ ಕುರಿತು ಸಂವಹನ ಸಚಿವಾಲಯ ಪ್ರಕಟಣೆ ಹೊರಡಿಸಿದ್ದು, ಭಾರತದ ಉಪಗ್ರಹ ಸಂವಹನ ಸೇವೆಗಳ ನಿಯಂತ್ರಣ ಚೌಕಟ್ಟು ಅತ್ಯಂತ ನ್ಯಾಯಯುತವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

**<>><><*><><<>**

ವಿವಿಧ ರಾಜ್ಯಗಳಲ್ಲಿ ನಡೆದ ಉಪಚುನಾವಣೆಯ ಫಲಿತಾಂಶಗಳು ಇಂದು ಪ್ರಕಟವಾಗಿದ್ದು, ಆಯಾ ರಾಜ್ಯಗಳ ಆಡಳಿತಾರೂಢ ಪಕ್ಷಗಳೇ ಕ್ಷೇತ್ರಗಳನ್ನು ಗೆದ್ದುಕೊಂಡಿವೆ. ಪಶ್ಚಿಮ ಬಂಗಾಳದ ಪೂರ್ವ ಮಿಡ್ನಾಪುರ ಜಿಲ್ಲೆಯ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ಹಾಸಿರಾಣಿ ರಥ್ ೧ ಲಕ್ಷದ ೨೨ ಸಾವಿರದ ೭೫೩ ಮತಗಳ ದಾಖಲೆಯ ಅಂತರದಿಂದ ಜಯ ಗಳಿಸಿದ್ದಾರೆ. ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಮಿಲನ್ ಪ್ರಧಾನ್ ೪೧ ಸಾವಿರದ ೬೭೪ ಮತಗಳನ್ನು ಪಡೆದಿದ್ದಾರೆ. ಇನ್ನು ರೆಜಿ ನಗರದಲ್ಲೂ ಕೂಡ ಬಿಜೆಪಿ ಅಭ್ಯರ್ಥಿ ಶಂಖರಾವ್ ಸರ್ಕಾರ್ ಗೆಲುವು ಸಾಧಿಸಿದ್ದಾರೆ. ತಮಿಳುನಾಡಿನ ಮಧುರಾಂತಕಂ ಮತ್ತು ಧರಾಪುರಂ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಡಳಿತಾರೂಢ 'ತಮಿಳಗ ವೆಟ್ರಿ ಕಳಗಂ'- ಟಿವಿಕೆ ಪಕ್ಷದ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಮಧುರಾಂತಕಂ ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ಮರಗತಂ ಕುಮಾರವೇಲ್ ಹಾಗೂ ಧರಾಪುರಂ ಕ್ಷೇತ್ರದಲ್ಲಿ ಟಿವಿಕೆಯ ಸತ್ಯಭಾಮ ಗೆಲುವು ಸಾಧಿಸಿದ್ದಾರೆ. ಪುದುಚೆರಿಯ ತಟ್ಟಂಚಾವಡಿ ಕ್ಷೇತ್ರದಲ್ಲಿ ಅಖಿಲ ಭಾರತ ಎನ್‌ಆರ್ ಕಾಂಗ್ರೆಸ್ ಪಕ್ಷದ ಅಶೋಕ್ ಆನಂದ್ ಗೆಲುವು ದಾಖಲಿಸಿದ್ದಾರೆ.

**<>><><*><><<>**

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಹಾಗೂ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ ಕೂಡಿರುವ ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ,

೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ತ್ರಿವಳಿ ತಲಾಖ್' ಕುರಿತ ಒಂದು ವರದಿ ಇಲ್ಲಿದೆ. ಭಾರತದಲ್ಲಿ ಮುಸ್ಲಿಂ ಮಹಿಳೆಗೆ ಯಾವುದೇ ಮುನ್ಸೂಚನೆ ಅಥವಾ ಕಾರಣವಿಲ್ಲದೆ ಒಂದೇ ಪದವನ್ನು ಮೂರು ಬಾರಿ ಉಚ್ಚರಿಸುವ ಮೂಲಕ ನೀಡಲಾಗುತ್ತಿದ್ದ ತಕ್ಷಣದ 'ತ್ರಿವಳಿ ತಲಾಖ್' ಪದ್ಧತಿಯನ್ನು ೨೦೧೯ ರ 'ಮುಸ್ಲಿಂ ಮಹಿಳೆಯರ ಮದುವೆ ಹಕ್ಕುಗಳ ರಕ್ಷಣೆ ಕಾಯ್ದೆ'ಯು ಕಾನೂನುಬಾಹಿರ ಎಂದು ಘೋಷಿಸಿತು. ಈ ಪದ್ಧತಿಯನ್ನು ಅಪರಾಧವೆಂದು ಪರಿಗಣಿಸಿದ ಕಾಯ್ದೆಯು, ತಪ್ಪಿತಸ್ಥರಿಗೆ ೩ ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ಅವಕಾಶ ಕಲ್ಪಿಸಿತು. ಕೇವಲ ನಿಷೇಧಕ್ಕಷ್ಟೇ ಸೀಮಿತವಾಗದೆ, ಈ ಕಾಯ್ದೆಯು ಸಂತ್ರಸ್ತ ಮಹಿಳೆಗೆ ಜೀವನಾಂಶ ಮತ್ತು ಅಪ್ರಾಪ್ತ ಮಕ್ಕಳ ಪಾಲನೆಯ ಸಾಂವಿಧಾನಿಕ ಹಕ್ಕನ್ನು ಖಾತ್ರಿಪಡಿಸಿತು. ಧರ್ಮ ಯಾವುದಿದ್ದರೂ ಪ್ರತಿಯೊಬ್ಬ ಭಾರತೀಯ ಮಹಿಳೆಗೂ ಸಾಂವಿಧಾನಿಕ ಸಮಾನತೆ ದೊರೆಯಬೇಕು ಎಂಬ ಪ್ರಧಾನಿಯವರ ನಿಲುವಿಗೆ ಇದು ಸಾಕ್ಷಿಯಾಗಿದೆ. ಈ ಶಾಸನ ಜಾರಿಗೆ ಬಂದ ಕೇವಲ ಒಂದು ವರ್ಷದಲ್ಲಿ ತ್ರಿವಳಿ ತಲಾಖ್ ಪ್ರಕರಣಗಳು ಶೇಕಡಾ ೮೨ ರಷ್ಟು ಇಳಿಕೆಯಾಗಿದ್ದು, ದೀರ್ಘಕಾಲದಿಂದ ವಂಚಿತರಾಗಿದ್ದ ಮಹಿಳೆಯರಿಗೆ ಸಾಂವಿಧಾನಿಕ ರಕ್ಷಣೆ ತಲುಪಿದೆ.

**<><><*><><<>**

ಅಂತಾರಾಷ್ಟ್ರೀಯ ಕಾನೂನು ಮತ್ತು ಮಾನವ ಹಕ್ಕುಗಳ ರಕ್ಷಣೆ ಹಾಗೂ ಶಾಂತಿ ಸ್ಥಾಪನೆಗೆ ನೀಡಿದ ಅತ್ಯುತ್ತಮ ಕೊಡುಗೆಗಾಗಿ ಭಾರತೀಯ ಮೂಲದ ದಕ್ಷಿಣ ಆಫ್ರಿಕಾದ ಖ್ಯಾತ ನ್ಯಾಯ ಶಾಸ್ತ್ರಜ್ಞೆ ನವನೀಥಂ ನವಿ ಪಿಳ್ಳೈ ಅವರಿಗೆ ೨೦೨೬ನೇ ಸಾಲಿನ ಪ್ರತಿಷ್ಠಿತ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಾಜಿ ಮುಖ್ಯಸ್ಥೆ ಹಾಗೂ ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿಗಳಾಗ ಸೇವೆ ಸಲ್ಲಿಸಿರುವ ನವಿ ಪಿಳ್ಳೈ, ವರ್ಣಭೇದ ಪಿಡುಗಿನ ಕಾಲದಲ್ಲಿ ಬೆಳೆದವರಾಗಿದ್ದು, ಅದರ ವಿರುದ್ಧ ಹೋರಾಡಿದ ಕಾರ್ಯಕರ್ತರ ಪರಿವಾಗಿ ವಾದ ಮಂಡಿಸುವ ಮೂಲಕ ಮಾನವ ಹಕ್ಕು ಹಾಗೂ ಸಮಾನತೆಯ ಪರವಾಗಿ ಸುದೀರ್ಘ ಕ್ರಾಂತಿಕಾರಿ ವೃತ್ತಿಜೀವನವನ್ನು ರೂಪಿಸಿಕೊಂಡರು. ೧೯೪೧ರಲ್ಲಿ ಡರ್ಬನ್‌ನಲ್ಲಿ ತಮಿಳು ಮೂಲದ ಭಾರತೀಯ ದಂಪತಿಗೆ ಜನಿಸಿದ ಇವರು, ದಕ್ಷಿಣ ಆಫ್ರಿಕಾದ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

**<><><*><><<>**

ವೈದ್ಯರ ಚೀಟಿ ಮೂಲಕ ಮಾತ್ರ ಮಾರಾಟ ಮಾಡಬೇಕಾದ ಔಷಧಗಳ ಜಾಹೀರಾತುಗಳ ಮೇಲಿನ ನಿಯಂತ್ರಣವನ್ನು ಬಲಪಡಿಸಲು, ೧೯೪೫ರ ಔಷಧ ನಿಯಮಗಳಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ. ಈ ತಿದ್ದುಪಡಿಯ ಪ್ರಕಾರ, ಔಷಧ ನಿಯಮಗಳ ಶೆಡ್ಯೂಲ್ ಎಚ್, ಎಚ್-೧ ಮತ್ತು ಎಕ್ಸ್ ಅಡಿಯಲ್ಲಿ ಬರುವ ಔಷಧಗಳ ಜಾಹೀರಾತು ಪ್ರಕಟಿಸಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕೆಂಬ ನಿಯಮವನ್ನು, ಔಷಧಗಳ ಮಾರಾಟ ಮತ್ತು ವಿತರಣೆಗೆ ಪರವಾನಗಿ ಹೊಂದಿರುವ ಸಂಸ್ಥೆಗಳಿಗೂ ವಿಸ್ತರಿಸಲು ಉದ್ದೇಶಿಸಲಾಗಿದೆ.

**<>><><*><><<>**

ಜಾರ್ಖಂಡ್‌ನ ರಾಂಚಿಯಲ್ಲಿಂದು ನಡೆಯುತ್ತಿರುವ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ, ಇತ್ತೀಚಿನ ವರದಿಯಂತೆ ೯.೨ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೧೧೧ ರನ್ ಗಳಿಸಿ ಆಡುತ್ತಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**